ಮಾನ್ಯ ಅಧ್ಯಕ್ಷರೆ, ಇದೇ ಸಮಯದಲ್ಲಿ ನಾನು ಇನ್ನೊಂದು ವಿಚಾರವನ್ನೂ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ ಮಾನ್ಯ ಸದಸ್ಯರೂ, ನಾನೂ ಹೋಗಿ ಒಂದು ಸ್ಕೀಂನ್ನು ಪ್ರಾರಂಭ ಮಾಡಿ ಬಂದಿದ್ದೇವೆ. ಅದರ ಕೆಲಸವನ್ನು ಲ್ಯಾಂಡ್ ಆರ್ಮಿಯವರು ವಹಿಸಿಕೊಂಡಿದ್ದಾರೆ. ಅದಕ್ಕೆ ಬೇಕಾದ ಹಣವನ್ನು ಕೊಡುವ ಸಂಪೂರ್ಣ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಂಡಿದೆ. ಆಲ್ಲಿ ಪಂಪ್ ಫಿಕ್ಸ್ ಮಾಡುತ್ತಿದ್ದಾರೆ. ಆದಕ್ಕೆ ಒಂದು ಓವರ್ ಹೆಡ್ ಟ್ಯಾಂಕ್‌ನ್ನು ಹಾಕಿದ್ದಾರೆ. ಎಸ್ಟಿಮೇಟ್ ಮಾಡಿದ್ದಾರೆ. ಈ ವಿಚಾರವನ್ನು ಆ ದಿವಸ ಅವರು ಆ ಸಭೆಯಲ್ಲೇ ಹೇಳಿದ್ದಾರೆ.

ಶ್ರೀ ಧರ್ಮಸಿಂಗ್.—ಹಿಂದೆ ಎಸ್ಟಿಮೇಟ್ ಮಾಡುವಾಗ ತಪ್ಪಾಗಿ ಮಾಡಿದ್ದರಿಂದ ಈಗ ಆ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ ಆದ್ದರಿಂದ ಇದನ್ನು ಇಷ್ಟಕ್ಕೇ ನಿಲ್ಲಿಸಿಬಿಡುತ್ತೇವೆಂದು ಆ ಸಭೆಯಲ್ಲೇ ಹೇಳಿದ್ದಾರೆ ಈಗ ಇದನ್ನು ರೀಕಾಸ್ಟ್ ಮಾಡಬೇಕೋ ಅಥವಾ ಲ್ಯಾಂಡ್ ಆರ್ಮಿಯವರೇ ಮುಂದುವರಿಸಬೇಕೋ ಎಂಬುದನ್ನು ಯೋಚನೆ ಮಾಡಬೇಕಾಗಿದೆ.

ಶ್ರೀ ಕೆ.ಬಿ. ಶಾಣಪ್ಪ.—ಸ್ವಾಮಿ, ಈ ಯೋಜನೆ ವರ್ಕಿಂಗ್ ಕಂಡೀಷನ್ ಸ್ಥಿತಿಯಲ್ಲಿದೆಯೆಂದು ಹೇಳಿದ್ದೀರಿ. ಆದರೆ ಆಲ್ಲಿ ಒಂದು ಎಕರೆಗೂ ಕೂಡ ನೀರನ್ನು ಕೊಟ್ಟಿಲ್ಲ. ಲಿಫ್ಟ್ ಇರಿಗೇಷನ್ ಆಗಿದೆ ಆದರೆ ಜನರು ಆದರಿಂದ ಇದುವರೆಗೂ ನೀರನ್ನು ಉಪಯೋಗ ಮಾಡುತ್ತಿಲ್ಲ. ಸಂಮಾರು ೮–೧೦ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಮೊದಲನೆಯ ಹಂತದ ಕೆನಾಲ್ ಕೆಲಸ ಆಗಿದೆ ಇದರಿಂದ ರೈತರಿಗೆ ನೀರನ್ನು ಒದಗಿಸಿಕೊಡಲು ವ್ಯವಸ್ಥೆ ಮಾಡುತ್ತೀರಾ ? ಇಟಗಾದ್ದೂ ಕೂಡ ಇದೇ ರೀತಿ ಆಗಿದೆ. ಆದ್ದರಿಂದ ಈ ಬಗ್ಗೆ ಸರ್ಕಾರದವರು ಹೆಚ್ಚಿನ ಗಮನಕೊಟ್ಟು ಆದಷ್ಟುಬೇಗ ಹಣವನ್ನು ಬಿಡುಗಡೆ ಮಾಡಿ ಬರುವ ಡಿಸೆಂಬರ್ ತಿಂಗಳೊಳಗಾಗಿ ಈ ಸ್ಕೀಂನ್ನು ಪೂರೈಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಹೆಚ್.ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರುವ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ, ಮಾಹಿತಿಯನ್ನು ತರಿಸಿಕೊಂಡು ಅವಶ್ಯಕತೆ ಇದ್ದರೆ ಈ ಕೆಲಸ ಮಾಡಿಸುವುದಕ್ಕೆ ನಾನೂ ಆದೇಶವನ್ನು ಕೊಡುತ್ತೇನೆ.

ರಾಜ್ಯದ ಸರ್ಕಾರಿ ಪ್ರೌಢಶಾಲೆ ಹಾಗೂ ಪ್ರಾಥಮಿಕ ಶಾಲೆಗಳಲ್ಲಿ ಬೋಧಕ ಹುದ್ದೆಗಳು ಖಾಲಿ ಇರುವುದು.

೯೧. ಶ್ರೀ ಎ. ಕೃಷ್ಣಪ್ಪ(ವರ್ತೂರು).—ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಸರ್ಕಾರಿ ಪ್ರೌಢಶಾಲೆ ಹಾಗೂ ಪ್ರಾಥಮಿಕ ಶಾಲೆಗಳಲ್ಲಿ ಎಷ್ಟು ಬೋಧಕ ಹುದ್ದೆಗಳು ಖಾಲಿ ಇವೆ ?

ಆ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ?

ಇ) ರಾಜ್ಯದ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಎಷ್ಟು ಬೋಧಕೇತರ ಹುದ್ದೆಗಳು ಖಾಲಿ ಇವೆ.

ಈ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಬಿ. ಸೋಮಶೇಖರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮಂತ್ರಿಗಳು).—

ಅ. ೧. ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳ ಸಂಖ್ಯೆ : ೪೫೩ (ಇದರಲ್ಲಿ ೩೫೬೫ ಗುತ್ತಿಗೆ ಆಧಾರದ ನೌಕರರು ಕೆಲಸ ಮಾಡುತ್ತಿದ್ದಾರೆ)

೨. ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಬೋಧಕ ಹುದ್ದೆ ಸಂಖ್ಯೆ ೫೬೦೫

೬೯೮೮

(ಇದರಲ್ಲಿ ೩೭೨೬ ಗುತ್ತಿಗೆ ಆಧಾರದ ನೌಕರರು ಕೆಲಸ ಮಾಡುತ್ತಿದ್ದಾರೆ)

ಅ) ಪ್ರೌಢ ಶಾಲಾ ಬೋಧಕ ಹುದ್ದೆಗಳನ್ನು ವಿಭಾಗೀಯ ಮಟ್ಟದ ನೇಮಕಾತಿ ಸಮಿತಿಯ ಮೂಲಕ ಹಾಗೂ ಪ್ರಾಥಮಿಕ ಶಾಲೆಗಳ ಬೋಧಕ ಹುದ್ದೆಗಳನ್ನು ಜಿಲ್ಲಾ ಮಟ್ಟದ ನೇಮಕಾತಿ ಸಮಿತಿಗಳ ಮೂಲಕ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ೧. ಪ್ರಥಮ ದರ್ಜೆ ಸಹಾಯಕರ ಹುದ್ದೆಗಳು ೫೬
೨. ನಾಲ್ಕನೆ ದರ್ಜೆ ನೌಕರರು ೪೯೨

ಈ) ಈಗ ಆರ್ಥಿಕ ಮಿತವ್ಯಯ ಆದೇಶವು ಜಾರಿಯಲ್ಲಿರುವುದರಿಂದ ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಲು ಅವಕಾಶವಿಲ್ಲ.

ಶ್ರೀ ಎ. ಕೃಷ್ಣಪ್ಪ.—ಮಾನ್ಯ ಮಂತ್ರಿಗಳ ಉತ್ತರದಲ್ಲಿ ಕಾಲಮಿತಿ ಕಾರ್ಯಕ್ರಮದ ಬಗ್ಗೆ ಏನೊಂದು ಸೂಚನೆಯನ್ನೂ ಕೊಟ್ಟಿಲ್ಲ. ದಯಮಾಡಿ ಸೂಚನೆಯನ್ನು ಕೊಡಬೇಕು. ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಿಲ್ಲ, ಆ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆಯೆಂದು ಕೇಳುತ್ತೇನೆ.

ಶ್ರೀ ಬಿ. ಸೋಮಶೇಖರ್.—ಈಗಾಗಲೇ ಸರ್ಕಾರ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ ಕ್ರಮ ತೆಗೆದುಕೊಂಡು ನೇಮಕಾತಿ ಸಮಿತಿಗಳನ್ನು ರಚನೆ ಮಾಡಲಾಗಿದೆ. ಆದಷ್ಟು ಬೇಗ ಸಮಿತಿಗಳು ಕೆಲಸ ಮಾಡಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಶ್ರೀ ಎ. ಕೃಷ್ಣಪ್ಪ.—ಕಾಲಮಿತಿಯ ಬಗ್ಗೆ ಸ್ಪಷ್ಟವಾದ ನೇರವಾದ ಉತ್ತರವನ್ನು ನಿರೀಕ್ಷಿಸುತ್ತಿದ್ದೇನೆ.

ಶ್ರೀ ಬಿ. ಸೋಮಶೇಖರ್.—ಯಾವುದರ ಬಗ್ಗೆ ನೇರವಾದ ಉತ್ತರ ಬೇಕು ?

ಶ್ರೀ ಎ. ಕೃಷ್ಣಪ್ಪ.—ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ನೇಮಕಾತಿಯ ಬಗ್ಗೆ.

ಶ್ರೀ ಬಿ. ಸೋಮಶೇಖರ್.—ಎರಡು ತಿಂಗಳೊಳಗಾಗಿ ಖಾಲಿಯಿರತಕ್ಕ ಹುದ್ದೆಗಳನ್ನು ನೇಮಕಾತಿ ಸಮಿತಿಯ ಮುಖಾಂತರ ಭರ್ತಿ ಮಾಡಲಾಗುವುದು.

ಕರ್ನಾಟಕ ಆಗ್ರೋ ಕಾರನ್ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಕನ್ನಡ ಹಾಗೂ ಕನ್ನಡೇತರ ನೌಕರರ ಬಗ್ಗೆ.

೨೦. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯ್ಕನಹಳ್ಳಿ).—ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಆಗ್ರೋ ಕಾರನ್ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಕನ್ನಡ ಹಾಗೂ ಕನ್ನಡೇತರ ನೌಕರರ ಸಂಖ್ಯೆ ಎಷ್ಟು ?

ಆ) ಸದರಿ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರು ಕನ್ನಡಿಗ ನೌಕರರಿಗೆ ಕಿರುಕುಳ ಕೊಡುತ್ತಿರುವುದಲ್ಲದೆ ಅಮಾನತ್ತಿನಲ್ಲಿಡುವುದಾಗಿ ಹಾಗೂ ಕೆಲಸದಿಂದ ತೆಗೆಯುವುದಾಗಿ ಬೆದರಿಸಿ ಅವರಿಂದ ಹಣ ವಸೂಲಿ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಇ) ಸದರಿ ವ್ಯವಸ್ಥಾಪಕ ನಿರ್ದೇಶಕರು ಕೆಲಸದಿಂದ ತೆಗೆದ ಹಾಕಿದ್ದ ಬೆಳಗಾಂದಲ್ಲಿನ ಹಿರಿಯ ಸಹಾಯಕ ಮ್ಯಾನೇಜರ್ ಒಬ್ಬರನ್ನು ಪುನರ್ ನೇಮಕ ಮಾಡಬೇಕೆಂಬುದಾಗಿ ಸಂಬಂಧಿಸಿದ ಮಂತ್ರಿಗಳು ಆದೇಶ ನೀಡಿದ್ದಾಗ್ಯೂ ಅವರ ಆದೇಶವನ್ನು ಕಡೆಗಣಿಸಿ ಇದುವರೆಗೂ ಪುನರ್ ನೇಮಕ ಆದೇಶ ಹೊರಡಿಸದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ, ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಳ್ಳುವ ಕ್ರಮವೇನು ?

ಈ ಇಂತಹ ಬೇಜವಾಬ್ದಾರಿ ಹಾಗೂ ಸಚಿವರ ಆದೇಶವನ್ನು ಕಡೆಗಣಿಸಿದ ಸದರಿ ಅಧಿಕಾರಿಯ ಮೇಲೆ ಸೂಕ್ತ ಕ್ರಮ ಕೈಗೊಳ್ಳುವುದಲ್ಲದೆ ತಕ್ಷಣ ವರ್ಗ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?